ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 252/2022**

**ಫ್ರಾಸಾ-11 ಚಾಸಾ- 15**

ಸಾಕ್ಷಿದಾರರ ಹೆಸರುಃ : ಗಿರಿಜಾ

ಗಂಡನ ಹೆಸರುಃ : ಆನಂದ

ವಯಸ್ಸುಃ : 63 ವರ್ಷ

ಉದ್ಯೋಗಃ : ಗೃಹಿಣಿ

ವಾಸ : ಹುಲ್ಲಹಳ್ಳಿ ಗ್ರಾಮ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಗೆ ಸಹಿಯನ್ನು ಸುಮಾರು 3 ವರ್ಷಗಳ ಹಿಂದೆ ನಮ್ಮೂರು ಕಿತ್ತಗಳಲೆಯಲ್ಲಿ ಹಾಕಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-14 ಎಂದು ಸಾಕ್ಷಿಯ ರುಜುವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಪೊಲೀಸರು ಸಹಿ ಹಾಕಿದ ಎಂದ ಕಾರಣ ಸಹಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಅದನ್ನು ಓದಿ ನೋಡಿಲ್ಲ. ನ್ಯಾಯಾಲಯದ ಮುಂದಿರುವ ಒಂದು ದೊಣ್ಣೆ , ಸುತ್ತಿಗೆ, ಖಾಲಿ ಟೆಟ್ರಾ ಪ್ಯಾಕೇಟನ್ನು ನಾನು ಈ ಹಿಂದೆ ನೋಡಿಲ್ಲ ಅವುಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಮತ್ತು ನನ್ನ ಮುಂದೆ ರಕ್ತದ ಕಲೆ ಇರುವ ಮಣ್ಣು ಮತ್ತು ರಕ್ತರಹಿತ ಮಣ್ಣನ್ನು ವಶಪಡಿಸಿಕೊಂಡಿಲ್ಲ.(ಮಾನ್ಯ ಸ.ಅ. ಬಟ್ಟೆಯಿಂದ ಪ್ಯಾಕು ಮಾಡಿದ 2 ಕವರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಿದೆ) ಬಟ್ಟೆಯಿಂದ ಸೀಲಾದ 2 ಡಬ್ಬಿಗಳನ್ನು ತೆರೆದು ಅದರೊಳಗಿದ್ದ ವಸ್ತುವನ್ನು ತೋರಿಸಿದಾಗ ಅವುಗಳನ್ನು ತಾನು ಈ ಹಿಂದೆ ನೋಡಿಲ್ಲ ಮತ್ತು ತನ್ನ ಸಮಕೆಮ ವಶಪಡಿಸಿಕೊಂಡಿಲ್ಲ

ಎನುನತ್ತಾರೆ. ಗುರುತಿಸುವಿಕೆಗಾಗಿ ದೊಣ್ಣೆಯನ್ನು ಎಂ.ಒ.2 ಎಂದು, ಸುತ್ತಿಗೆಯನ್ನು ಎಂ.ಒ.3 ಎಂದು, ಖಾಲಿ ಟೆಟ್ರಾ ಪ್ಯಾಕೇಟನ್ನು ಎಂ.ಒ.4 ಎಂದು, ರಕ್ತರಹಿತ ಮಣ್ಣನ್ನು ಎಂ.ಒ.5 ಎಂದು, ರಕ್ತಸಹಿತ ಮಣ್ಣನ್ನು ಎಂ.ಒ.6 ಎಂದು ಗುರುತಿಸಲಾಯಿತು.

2.ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ. ನಾನು ಆತನನ್ನು ಈ ಹಿಂದೆ ನೋಡಿಲ್ಲ. ಆರೋಪಿತನನ್ನು ಕಿತ್ತಗಳಲೆಯ ಸದಾನಂದ ಅಲಿಯಾಸ್ ಷಣ್ಮುಖ ಇವರ ಲೈನ್ ಮನೆಯ ಮುಂಭಾಗದಲ್ಲಿರುವ ಹೊಸದಾಗಿ ನಿರ್ಮಿಸುತ್ತಿದ್ದ ಫೌಂಡೇಷನ್ ಬಳಿ ಕರೆದುಕೊಂಡು ಬಂದಿಲ್ಲ. ಅಲ್ಲಿ ನನ್ನ ಸಮಕ್ಷಮ ಯಾವುದೇ ಮಹಜರನ್ನು ನಡೆಸಿಲ್ಲ ಹಾಗೂ ಯಾವುದೇ ಸಹಿ ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿಃ9-6-2022ರಂದು ಪೊಲೀಸರು ನನ್ನನ್ನು ಕಿತ್ತಗಳಲೆ ಗ್ರಾಮದ ಸದಾನಂದ ಆಲಿಯಾಸ್ ಷಣ್ಮುಖ ಇವರ ಲೈನ್ಮನೆಯ ದಕ್ಷಿಣ ಭಾಗದಲ್ಲಿರುವ ಲೈನ್ಮನೆಯ ಮಧ್ಯಭಾಗಕ್ಕೆ ಆರೋಪಿ ಇದೇ ಕೃತ್ಯಸ್ಥ,ಳವೆಂದು ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ಸ್ಥಳದಿಂದ ಆರೋಪಿಯು ಎಂ.ಒ.2 ರಿಂದ 4ನ್ನು ಹಾಜರುಪಡಿಸಿದ್ದನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ತಾನು ಆರೋಪಿಯನ್ನು ಕೊಲೆ ಮಾಡಿ ಆ ಜಾಗದಲ್ಲಿ ಹಾಕಿದ್ದು ಎಂದು ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನನ್ನನ್ನು ಆರೋಪಿತರು ಹೇಳಿದಂತೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಪರಿಶೀಲಿಸಿ ಸ್ಥಳದಲ್ಲಿ ಬಿದ್ದಿದ್ದಂತಹ ರಕ್ತರಹಿತ ಹಾಗೂ ರಕ್ತಸಹಿತ

ಮಣ್ಣುನ್ನು ಎಂ.ಒ.5 ಮತ್ತು 6ರಂತೆ ವಶಪಡಿಸಿಕೊಂಡು ನಿಪಿ-14ರಂತೆ ಮಹಜರು ಮಾಡಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**